Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 50/2018

ಫ್ರಾ.ಸಾ. 1 ಚಾ.ಸಾ. 3

| | | |
|---|---|---|
| ಹೆಸರು | : | ಅಮರೇಶ |
| ತಂದೆಯ ಹೆಸರು | : | ಭೀಮರಾಯ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಪಿಐ ಬಾಲ್ಕಿ ನಗರ ಬೀದರ |
| ವಾಸ | : | ಬೀದರ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 22-08-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ದಿಃ 17.02.2014 ರಿಂದ ದಿಃ 03.08.2016 ರವರೆಗೆ ಪಿಐ ಲೊಕಾಯುಕ್ತ ಯಾದಗಿರಿ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 08.08.2014 ರಂದು ಎಸ್.ಪಿ ಲೋಕಾಯುಕ್ತ ಯಾದಗಿರಿ ರವರಿಗೆ ಈ ಪ್ರಕರಣದ ಆರೋಪಿ ಅಕ್ರಮ ಆಸ್ತಿಯನ್ನು ಸಂಪಾದಿಸಿರುತ್ತಾರೆ ಎಂದು ಬಾತ್ಮಿಯ ಮೇರೆಗೆ ಸೋರ್ಸ ವರದಿಯನ್ನು ತಯಾರಿಸಿ ಎಸ್.ಪಿ ರವರಿಗೆ ಪ್ರಕರಣ ದಾಖಲಿಸಲು ಅನುಮತಿ ಕೋರಿದೆನು.

3. ಆರೋಪಿತನು ಹೊಂದಿರುವ ಒಟ್ಟು ಸ್ತಿರ ಮತ್ತು ಚರ ಆಸ್ತಿಗಳ ಮೌಲ್ಯ ರೂ. 47,01,149/- ಆಗಿದ್ದು ಅವರ ಬಲ್ಲ ಮೂಲಗಳ ಆದಾಯ ರೂ. 42,92,500/- ಆಗಿರುತ್ತದೆ. ಸದರಿ ಆರೋಪಿಯ ಖರ್ಚು ರೂ. 40,00,000/- ಇದ್ದು ಆ ಮೂಲಕ ಅವರ ಅಕ್ರಮ ಆಸ್ತಿ ರೂ. 44,08,649,/- ಅಂತಾ ಸೋರ್ಸ ವರದಿ ನೀಡಿದ್ದೇನೆ. ಸದರಿ ಅಕ್ರಮ ಸಂಪಾದನೆಯ ಪ್ರಮಾಣ ಶೇ 102.70 ಆಗಿರುತ್ತದೆ. ಆರೋಪಿ ನೌಕರನ ಆದಾಯದ ಮೂಲವನ್ನು ಲೆಕ್ಕ ಮಾಡಲು ದಿಃ 02.07.1985 ರಿಂದ ದಿಃ 08.08.2014 ರವರೆಗೆ ಪರಿಶೋಧನಾ ಅವಧಿ ಎಂದು ಪರಿಗಣಿಸಿರುತ್ತೇನೆ. ಸದರಿ ಸೋರ್ಸ ವರದಿ ಸಾಕ್ಷಿಗೆ ತೋರಿಸಿದ್ದು ಅದನ್ನು ಅವರು ಗುರುತಿಸಿದ್ದು ಸದರಿ ವರದಿಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

4. ದಿಃ 25.08.2014 ರಂದು ನಾನು ನಿಪಿ-1 ರಂತೆ ವರದಿಯನ್ನು ನೀಡಿ ಪ್ರಕರಣ ದಾಖಲಿಸಿ ತನಿಖೆ ನಡೆಸಲು ಕೋರಿರುತ್ತೇನೆ. ಸದರಿ ನಡಾವಳಿಗಳನ್ನು ಮಾಡಿದ ನಮ್ಮ ಲೋಕಾಯುಕ್ತ ಅಧೀಕ್ಷಕರಾದ ಜಿ ಹನುಮೇಶ ರವರು ಡಿಸೆಂಬರ್ 2024 ರಲ್ಲಿ ಮೃತಪಟ್ಟಿದ್ದು ಅವರ ಸಹಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ ಸಾಕ್ಷಿಗೆ ಕಡತದಲ್ಲಿನ ನಡಾವಳಿಯನ್ನು ತೋರಿಸಿ ಶ್ರೀ. ಜಿ.ಹನುಮೇಶ ರವರ ಸಹಿ ಗುರುತಿಸಿದ್ದು ಸದರಿ ನಡಾವಳಿಯನ್ನು ನಿಪಿ-2 ಅಂತಾ ಗುರುತು ಮಾಡಲಾಯಿತು.

5. ಅದರಂತೆ ಸದರಿ ನಿಪಿ-1 ಮತ್ತು 2 ನ್ನು ಆಧರಸಿ ಡಿಎಸ್‌ಪಿ ಆರ್ ಹೆಚ್ ನಾಯಕ ಪ್ರಕರಣ ದಾಖಲಿಸಿದ್ದು ಸದರಿ ಡಿಎಸ್‌ಪಿ ರವರು ಈಗ್ಗೆ ಸುಮಾರು 4 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ನಾನು ಸದರಿ ಡಿ ಎಸ್ ಪಿ ರವರ ಜೊತೆ ಕರ್ತವ್ಯ ನಿರ್ವಹಿಸಿದ್ದು ಅವರ ಸಹಿಗಳನ್ನು ನೋಡಿದ್ದೇನೆ. ಕಡತದಲ್ಲಿನ ಪ್ರ.ವ.ವರದಿ ಮೇಲಿನ ಡಿ.ಎಸ್.ಪಿ ಆರ್.ಹೆಚ್ ನಾಯಕ ರವರ ಸಹಿ ಗುರುತಿಸಿದ್ದು ಸದರಿ ಪ್ರ.ವ.ವನ್ನು ನಿಪಿ-3 ಅಂತಾ ಗುರುತು ಮಾಡಲಾಯಿತು. ನಂತರ ಪ್ರ.ವ.ವ ಆಧಾರಿಸಿ ಡಿ ಎಸ್ ಪಿ ರವರು ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಾಂಟನ್ನು ನನ್ನ ಮತ್ತು ಚಾಸಾ-2 ಡಿ ಎಸ್ ಪಿ ರವರ ಹೆಸರಿಗೆ ಪಡೆದಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ಶೋಧನಾ ವಾರಂಟಗಳನ್ನು ತೋರಿಸಿ ಗುರುತಿಸಿದ್ದು ಅವುಗಳನ್ನು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು.

6. ಅದೇ ದಿನ ನಮ್ಮ ಉಪ ಅಧೀಕ್ಷರು ಲೋಕಾಯುಕ್ತ ಇವರು ಈ ಪ್ರಕರಣದಲ್ಲಿ ಚಾಸಾ-8 ಮತ್ತು 9 ಲಕ್ಷ್ಮಣ ಮತ್ತು ಪ್ರಶಾಂತ, ನನ್ನ ಜೊತೆ ಬಂದಿದ್ದು, ಚಾಸಾ- 5 ರಿಂದ 7 ಪ್ರಾಣೇಶ, ಆನಂದ, ಕಮಲಬಾಯಿ ಇವರು ಡಿ ಎಸ್ ಪಿ ರವರ ಜೊತೆ ಪಂಚರಾಗಿ ಹೋಗಿರುತ್ತಾರೆ. ನಮಗೆ ಆರೋಪಿತನ ಶಹಾಪೂರದಲ್ಲಿದ್ದ ಸರ್ಕಾರಿ ನಿವಾಸ ಮತ್ತು ಕಚೇರಿ ಶೋಧಿಸಲು ನಿಯೋಜಿಸಲಾಗಿತ್ತು. ದಿಃ 25.08.2014 ರಂದು ನಾನು ಲೊಕಾಯುಕ್ತ ಠಾಣೆಯಲ್ಲಿದ್ದಾಗ ಡಿ ಎಸ್ ಪಿ ರವರು ಚಾಸಾ-8 ಮತ್ತು 9 ರವರನ್ನು ಪರಿಚಯಿಸಿ ಮಾರನನೇ ದಿನ ಬೆಃ 5.00 ಗಂಟೆಗೆ ಬರಲು ತಿಳಿಸಿದ್ದು, ಈ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಲು ತಿಳಿಸಿದ್ದು, ಅದರಂತೆ ದಿಃ 26.08.2014 ರಂದು ನಾನು ಮತ್ತು ಪಂಚರು ಕೂಡಿ ಬೆಃ 5.00 ಗಂಟೆಗೆ ಸಿಬ್ಬಂಧಿಗಳಾದ ಶ್ರೀವಾಸ, ವಿಜಯಕುಮಾರ, ನೀಲಕಂಠ ಸ್ವಾ ಮಿ, ಶಿವಕುಮಾರ ರವರೊಂದಿಗೆ ಬೆಃ 6.00 ಗಂಟೆಗೆ ಆರೋಪಿತನ ಶಹಾಪೂರದ ಐಬಿ ಬಳಿ ಇರುವ ಸರ್ಕಾರಿ ನಿವಾಸ ಶೋಧನೆ ಮಾಡಲಾಗಿ ಅವರ ಸರ್ಕಾರಿ ನಿವಾಸ ಬೀಗ ಹಾಕಲಾಗಿದ್ದು, ನಾವು ಅಲ್ಲಿಯೇ ಕಾಯ್ದು ಕುಳಿತ್ತಿದ್ದಾಗ ಬೆಃ 7.25 ಗಂಟೆಗೆ ಒಬ್ಬ ವ್ಯಕ್ತಿ ಬಂದು ಸದರಿ ಸರ್ಕಾರಿ ನಿವಾಸ ಬೀಗ ತೆಗೆದಿದ್ದು, ಅವು ಅವನಿಗೆ ವಿಚಾರಿಸಿದಾಗ ಆತನ ಹೆಸರು ಭೀಮರಾಯ ಕವಲ್ದಾರ, ಸಹಾಯಕ ಕಾರ್ಯಪಾಲಕ ಅಂಭಿಯಂತರರು, ಪಂಚಾಯತರಾಜ ಇಂಜೀನಿಯರ ವಿಭಾಗ ಅಂತಾ ಹೇಳಿದ್ದು, ಅವರಿಗೆ ಶೋಧನಾ ವಾರಂಟ ತೋರಿಸಿ, ಮನೆ ಶೋದನೆ ಮಾಡಬೇಕಾಗಿದೆ ಎಂದು ತೋರಿಸಿದ್ದು,

ಅವರು ಒಪ್ಪಿ ಕೊಂಡಿದ್ದು, ಅವರ, ನನ್ನ ಮತ್ತು ಪಂಚರ ಸಹಿ ಮಾಡಿರುತ್ತೇವೆ. ಸದರಿ ಮನೆಯ ಮೊದಲನೆ ಕೊಠಡಿ ಪಶೀಲಿಸಲಾಗಿ ರೂ. 42,000/- ಬೆಲೆಯ ಫ್ಯಾನ್, ಟೇಬಲ್, ಕೂಲರ್, ಒಂದು ಮೊಬೈಲ್, ಕೈ ಗಡಿಯಾರ, 07 ಪ್ಲಾಸ್ಟಿಕ್ ಕುರ್ಚಿಗಳು ಸಾಮಾನುಗಳು ಇದ್ದವು.

7. ಅಡುಗೆ ಮನೆ ಪರಿಶೀಲನೆ ಮಾಡಲಾಗಿ ಅಡುಗೆ ಮಾಡುವ ಸುಮಾರು ರೂ. 1500/- ಬೆಲೆಯ ಸಾಮಾನುಗಳು ಇದ್ದವು. ಆರೋಪಿತರ ಬಳಿ ಒಂದು 5 ಗ್ರಾಂ ಬಂಗಾರದ ಉಂಗುರ ಇತ್ತು ಅದು ರೂ. 13500/- ಇದ್ದು, ಮತ್ತೊಂದು ಬಂಗಾರದ ಬುಬಾ ಲಾಕೇಟ್ ಸುಮಾರು 24.6 ಗ್ರಾಂ ಇದ್ದು ಅದರ ಕಿಮ್ಮತ್ತು ರೂ. 52900/- ಇತ್ತು. ಅವುಗಳನ್ನು ಚಾಸಾ-13 ಅಕ್ಕಸಾಲಿಗ ಸುರೇಶ ರವರನ್ನು ನಮ್ಮ ಸಿಬ್ಬಂದಿ ಕರೆದುಕೊಂಡು ಬಂದ ಮೇರೆಗೆ ತೂಕ ಮಾಡಿಸಿ ಮೌಲ್ಯಮಾಪನ ಮಾಡಿರುತ್ತಾರೆ.

8. ಆರೋಪಿತರ ಬಳಿ ನಗದು ಹಣ ರೂ. 50,490/- ಇತ್ತು. ಆರೋಪಿತರ ಬಳಿ ಇದ್ದ ಎಟಿಎಂ ಕಾರ್ಡ ಅದನ್ನು ಜಪ್ತಿಪಡಿಸಿಕೊಂಡೆವು. ನಂತರ ಸದರಿ ಪಂಚನಾಮೆಯನ್ನು ಬೆಃ 7.30 ರಿಂದ 9.30 ರವರೆಗೆ ಬರೆದು ಅದಕ್ಕೆ ಪಂಚರು, ಬೆರಳಚ್ಚು ಮಾಡಿದರ ಸಹಿ ಪಡೆದು ನಾನು ಸಹಿ ಮಾಡಿದ್ದೇನೆ. ಅದರ ಪ್ರತಿಯನ್ನು ಆರೋಪಿಗೆ ನೀಡಿದ್ದೇನೆ. ಸಾಕ್ಷಿಗೆ ಕಡತದಲ್ಲಿ ಪಂಚನಾಮೆ ತೋರಿಸಿದ್ದು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

9. ನಂತರ ಆರೋಪಿತರನ್ನು ಅವರ ಸರ್ಕಾರಿ ನಿವಾಸ ಹಿಂಬದಿಯಿಂದ ಪಂಚಾಯತರಾದ ಕಚೇರಿಗೆ ಬೇಟಿ ನೀಡಿ, ಚಾಸಾ-8 ಮತ್ತು 9 ಲಕ್ಷ್ಮಣ ಮತ್ತು ಪ್ರಶಾಂತ, ರವರ ಸಮಕ್ಷಮ ಆರೋಪಿಗೆ ಶೋಧನಾ ವಾರೆಂಟ ತೋರಿಸಿ ಆರೋಪಿತನ ಸಹಿ ಪಡೆದೆನು. ನಂತರ ಅಲ್ಲಿಯೇ ಕೆಲಸ ಮಾಡುತ್ತಿದ್ದ ಆರೋಪಿತನ ಕಚೇರಿಯ ಪ್ರ.ದ.ಸ ಚಂದ್ರಪ್ಪ ಸದರಿ ಕಚೇರಿಯನ್ನು ತೋರಿಸಿದ್ದು, ಅದನ್ನು ತೆಗೆದಿಸಿ ಪರಿಶೀಲಿಸಿ ಶೋಧನೆ ಮಾಡಿದಾಗ ಯಾವುದೇ ಬೆಲೆ ಬಾಳುವ ವಸ್ತುಗಳು ಕಂಡುಬರಲಿಲ್ಲ. ನಂತರ ಸದರಿ ಪಂಚನಾಮೆಯನ್ನು ಬೆಃ 10.00 ರಿಂದ 10.45 ರವರೆಗೆ ಬರೆದು ಅದಕ್ಕೆ ಪಂಚರು, ಆರೋಪಿ ಬೆರಳಚ್ಚು ಮಾಡಿದರ ಸಹಿ ಪಡೆದು ನಾನು ಸಹಿ ಮಾಡಿದ್ದೇನೆ. ಅದರ ಪ್ರತಿಯನ್ನು ಆರೋಪಿಗೆ ನೀಡಿದ್ದೇನೆ. ಸಾಕ್ಷಿಗೆ ಕಡತದಲ್ಲಿ ಪಂಚನಾಮೆ ತೋರಿಸಿದ್ದು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಆರೋಪಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ನಾನು ಈ ಪರಕರಣದ ಶೋಧನಾ ವಾರಂಟಗಳೊಂದಿಗೆ, ಪಂಚನಾಮೆಗಳನ್ನು ಮತ್ತು ಮುದ್ದೆ ಮಾಲುಗಳನ್ನು ಚಾಸಾ-2 ಡಿ.ಎಸ್.ಸಪಿ ರವರಿಗೆ ನೀಡಿದ್ದೇನೆ. ಸದರಿ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಗೆ ನಿಪಿ-5 ನ್ನು ತೋರಿಸಿ ಆರೋಪಿಯ ಸಹಿಯನ್ನು ಗುರುತಿಸಿದ್ದು ಆರೋಪಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಅನುಮತಿಸಿ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)**

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.